(ಸಾಕ್ಷಿಯನ್ನು ದಿನಾಂಕ 18-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಎಪಿಪಿಯವರು ಮುಂದುವರಿದ ಮುಖ್ಯವಿಚಾರಣೆ ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್. ಜಿ. ಹೆಗಡೆಯವರಿಂದಃ**

ನಾನು ಬಿಎ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಕಳೆದ 15 ವರ್ಷಗಳಿಂದ ನನಗೆ ಕೋ-ಆಪ್. ಸೊಸೈಟಿಯಲ್ಲಿ ಕೆಲಸ ಮಾಡಲು ಅನುಭವ ಇದೆ. 3 ಅವಧಿಗೆ 1 ನೇ ಆರೋಪಿ ನನ್ನ ಜೊತೆ ನಿರ್ದೇಶಕನಾಗಿ ಕೆಲಸ ಮಾಡಿರುತ್ತಾರೆ. ಸೊಸೈಟಿಯಲ್ಲಿ 11 ಜನ ನಿರ್ದೇಶಕರು ಇರುತ್ತಾರೆ. 11 ಜನರ ಬಹುಮತದ ಮೇರೆಗೆ ನಾನು ಅಧ್ಯಕ್ಷನಾಗಿದ್ದೆ ಎಂದರೆ ಸರಿ. ದಿನಾಂಕ 16-09-2016 ರಲ್ಲಿ ನಡೆದ ಸಾಮಾನ್ಯ ಸಭೆಯ ಕಾಲಕ್ಕೆ ಸೊಸೈಟಿಯಲ್ಲಿ ಅವ್ಯವಹಾರ ಆಗಿದೆ ಎಂಬುದು ಗೊತ್ತಾಗಿರುತ್ತದೆ. ಪ್ರತಿ ಸಮಾನ್ಯ ಸಭೆಯಲ್ಲಿ ಆದಾಯ-ಖರ್ಚಿನ ಪಟ್ಟಿಯನ್ನು ತಯಾರು ಮಾಡಿ ಎಲ್ಲಾ ಸದಸ್ಯರಿಗೆ ಮತ್ತು ನೋಟೀಸ್ ಬೋರ್ಡಿಗೆ ಹಾಕಲಾಗುತ್ತದೆ ಎಂದರೆ ಸರಿ. ದಿನಾಂಕ 16-09-2016 ರ ಸಾಮಾನ್ಯ

ಸಭೆಯ ಕಾಲಕ್ಕೆ ಸೊಸೈಟಿಯು ಎಷ್ಟು ನಷ್ಟವನ್ನು ಅನಭವಿಸಿತ್ತು ಎಂಬುದನ್ನು ನಮೂದಿಸಲಾಗಿತ್ತು ಎಂದರೆ ಅದು ನನಗೆ ನೆನಪಿಲ್ಲ.

ಈಗ ಸಾಕ್ಷಿಗೆ 01-04-2015 ರಿಂದ 31-03-2016 ರವರೆಗೆ ಜಮಾ ಖರ್ಚು ಪತ್ರಿಕೆಯೊಡನೆ ಇರುವ 31-03-2016 ಕ್ಕೆ ಇದ್ದಂತೆ ಅಡಾವೆ ಪತ್ರಿಕೆಯ ದೃಢೀಕೃತ ನಕಲನ್ನು ತೋರಿಸಿ ಇದರ ಕಾಲಂ ನಂ.6 ರ ಪ್ರಕಾರ ವ್ಯಾಪಾರ ಉದ್ರಿ ಬರತಕ್ಕದ್ದು, 9,48,498-00 ಬಾಕಿ ಇತ್ತು ಎಂದು ಕೇಳಲಾಗಿ ಆ ರೀತಿ ನಮೂದು ಇದೆ ಎನ್ನುತ್ತಾರೆ. ಸದರಿ ದೃಢೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಕಾರ್ಯದರ್ಶಿಯು ಆಡಳಿತ ಮಂಡಳಿಗೆ ನಿಡಿ-1 ರಂತೆ ಸುಳ್ಳು ಮಾಹಿತಿಯನ್ನು ನೀಡಿದ್ದು ನಿಡಿ-1 ರ ಸುಳ್ಳು ಮಾಹಿತಿಯನ್ನೇ ಕಾರ್ಯದರ್ಶಿ ನೋಟೀಸ್ ಬೋರ್ಡಿಗೆ ಅಂಟಿಸಿರುತ್ತಾರೆ ಎನ್ನುತ್ತಾರೆ.

ಈಗ ಸಾಕ್ಷಿಗೆ ದಿನಾಂಕ 31-03-2018 ರ ಅಡಾವೆ ಪತ್ರದ ಇನ್ನೊಂದು ದೃಢೀಕೃತ ನಕಲನ್ನು ತೋರಿಸಿ ಇದರ ಕಾಲಂ ನಂ.6 ರ ಪ್ರಕಾರ ವ್ಯಾಪಾರ ಉದ್ರಿ ಬರತಕ್ಕದ್ದು ರೂ.94,84,982-00 ಬಾಕಿ ಇತ್ತು ಎಂದು ಕೇಳಲಾಗಿ ಅದು ಸರಿ ಇದೆ ಎನ್ನುತ್ತಾರೆ. ಸದರಿ ದೃಢೀಕೃತ ನಕಲನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಸದರಿ ರೂ.94,84,982-00 ನಿಜವಾದ ಬಾಕಿಯಾಗಿದ್ದು ಸೊಸೈಟಿಗೆ ಬರಬೇಕಾದ ಮೊತ್ತ ಎನ್ನುತ್ತಾರೆ. ಸದರಿ ದಿನ ನಡೆದ ಮೀಟಿಂಗನಲ್ಲಿ 1 ನೇ ಆರೋಪಿ ಹಾಜರಾಗಿದ್ದರು ಎಂದರೆ ಸರಿ. 1 ನೇ ಆರೋಪಿ ಸದರಿ ಮೀಟಿಂಗನಲ್ಲಿ ಸಂಘದಿಂದ ಬೆಳೆಸಾಲ ಕೊಡಬೇಕಾಗಿದ್ದು ಈ ರೀತಿ ಬಾಕಿ ಇದ್ದರೆ ಕಷ್ಟ ಆಗುತ್ತದೆ ಏನಾದರೂ ಮಾಡಿ ಎಂದು ಅಧ್ಯಕ್ಷರಾಗಿದ್ದ ನನ್ನನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಕಾರ್ಯದರ್ಶಿ ಸೇರಿ ಸದರಿ ವ್ಯವಹಾರವನ್ನು ಸರಿ ಮಾಡುತ್ತೇವೆ ನೀವು ಸುಮ್ಮನಿರಿ ಎಂದು 1 ನೇ ಆರೋಪಿಗೆ ಶಾಂತಗೊಳಿಸಿದ್ದೆ ಎಂದರೆ ಸರಿಯಲ್ಲ.

ಸೊಸೈಟಿಯಿಂದ ಪ್ರತಿವರ್ಷ ಕೃಷಿಕರಿಗೆ ಬೆಳೆಸಾಲ ಕೊಡುತ್ತೇವೆ ಎಂದರೆ ಸರಿ. ಬೆಳೆಸಾಲವನ್ನು ಕೆಡಿಸಿಸಿ ಬ್ಯಾಂಕಿನವರು ಮಂಜೂರು ಮಾಡಿಕೊಡಬೇಕಾಗುತ್ತದೆ ಎಂದರೆ ಸರಿ. ರೈತರು ಸೊಸೈಟಿಗೆ ಹಣ ತುಂಬಿದ ದಿನದಿಂದ ಒಂದು ತಿಂಗಳು 22 ದಿನದಲ್ಲಿ ಬೆಳೆಸಾಲ ಮಂಜೂರಾಗುತ್ತದೆ ಎಂದರೆ ಸರಿ. ನಿರ್ದೇಶಕರು ಸೊಸೈಟಿಯ ಹಿತದೃಷ್ಟಿಯಿಂದ ತಮ್ಮ ಹಣವನ್ನು ರೈತರಿಗೆ ಸಾಲವಾಗಿ ನೀಡುತ್ತಾರೆ ಎಂದರೆ ಅದು ಸರಿಯಲ್ಲ. 1 ನೇ ಆರೋಪಿ ನಿರ್ದೇಶಕನಾಗಿ ತನ್ನ ಹಣವನ್ನು 2 ನೇ ಆರೋಪಿಯ ಮೂಲಕ ರೈತರಿಗೆ ಸಾಲವಾಗಿ ಕೊಡುತ್ತಿದ್ದರು ಎಂದರೆ ನನ್ನ ಗಮನಕ್ಕೆ ಗೊತ್ತಿರುವಂತೆ ಆ ರೀತಿ ನಡೆದಿರುವುದಿಲ್ಲ ಎನ್ನುತ್ತಾರೆ. 1 ನೇ ಆರೋಪಿ ಸೊಸೈಟಿಯಲ್ಲಿ 10 ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ಎಫ್.ಡಿ. ಇರಿಸಿರುತ್ತಾರೆ ಎಂದರೆ ಇಟ್ಟಿರಬಹುದು ಅದು ನನ್ನ ಗಮನಕ್ಕೆ ಇಲ್ಲ ಎನ್ನುತ್ತಾರೆ. ಕಾರ್ಯದರ್ಶಿಯವರು ವೈಯಕ್ತಿಕವಾಗಿ ಸಂಘದ ಯಾವೆಲ್ಲ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬುದು ಕಲಂ 64 ರ ವಿಚಾರಣೆ ಆಗುವವರೆಗೂ ನನ್ನ ಗಮನಕ್ಕೆ ಬಂದಿರಲಿಲ್ಲ. ಸಾಮಾನ್ಯ ಸಭೆಯಲ್ಲಿ ಕಾರ್ಯದರ್ಶಿಯ ಅವ್ಯವಹಾರ ನಮ್ಮ ಗಮನಕ್ಕೆ ಕಂಡುಬಂದ ತಕ್ಷಣವೇ ಪೋಲೀಸರಿಗೆ ದೂರು ನೀಡಿಲ್ಲ. ಕಾರ್ಯದರ್ಶಿಯವರನ್ನು ವಿಚಾರಿಸಿರುತ್ತೇವೆ. ಆಗ ಆರೋಪಿಯು ನನಗೆ ಹಣ ಬರುವುದಿದೆ, ಅದನ್ನೆಲ್ಲ ಸಂಘಕ್ಕೆ ತುಂಬಿ ಲೆಕ್ಕವನ್ನು

ಸರಿ ಮಾಡಿಕೊಡುತ್ತೇನೆ ಎಂದು ಹೇಳಿದ್ದರು. ಅದೇ ಕಾಲಕ್ಕೆ ಕಾರ್ಯದರ್ಶಿಯವರು ನಿಪಿ-3 ರ ಚೆಕ್‌ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಘಟನೆ ನಡೆದದ್ದು ದಿನಾಂಕ 16-09-2016 ರಂದು ಆದರೆ ಚೆಕನ್ನು ತೆಗೆದುಕೊಂಡು ಹೋಗಿರುವುದು ದಿನಾಂಕ 26-09-2016 ಆಗಿರುತ್ತದೆ. ಸಾಕ್ಷಿಯು ಮುಂದುವರಿದು ಕಾರ್ಯದರ್ಶಿಯವರು ಸಿಡಿಒರವರಿಗೆ ಒಂದು ಪತ್ರ ಬರೆದು ತಾನು ಕರ್ತವ್ಯದ ನಿಮಿತ್ತ ಹೊನ್ನಾವರಕ್ಕೆ ಬರುವ ಕಾರಣಕ್ಕೆ 2 ನೇ ಆರೋಪಿಗೆ 3 ಚೆಕಗಳನ್ನು ನೀಡಿದ್ದು ಅವುಗಳ ಪೈಕಿ 2 ಚೆಕ್ಕು ಸರಿಯಾಗಿ ಬಳಕೆಯಾಗಿದ್ದು, ಒಂದು ಚೆಕ್ಕು ಬಳಕೆಯಾಗಿರುವುದಿಲ್ಲ ಮತ್ತು ಈ ಬಗ್ಗೆ ವಿಚಾರಿಸಿದಾಗ 2 ನೇ ಆರೋಪಿ ಸದರಿ ಚೆಕ್ಕನ್ನು 1 ನೇ ಆರೋಪಿಗೆ ನೀಡಿದ್ದು ಸಂಘದ ವತಿಯಿಂದ 1 ನೇ ಆರೋಪಿಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲದಿದ್ದರೂ ಸದರಿ ಚೆಕ್‌ನ್ನು ನೀಡಿರುವುದರಿಂದ ಇದನ್ನು ಯಾವ ರೀತಿ ಜಮಾ ಖರ್ಚು ಮಾಡಬೇಕು ಅಂತ ಕೇಳಿ ಪತ್ರ ಬರೆದಿದ್ದರು ಎನ್ನುತ್ತಾರೆ.

2016 ರಲ್ಲಿ 2 ನೇ ಆರೋಪಿ, ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗೆ ಸಹಾಯಕನಾಗಿ ಎಲ್. ವಿ. ಶಾನಭಾಗ ಎನ್ನುವವರು ಇದ್ದರು. ಸೊಸೈಟಿಯಲ್ಲಿ ನೌಕರರ ಹಾಜರಾತಿ ರಜಿಸ್ಟರನ್ನು ಇಡಲಾಗಿರುತ್ತದೆ.

ಈಗ ಸಾಕ್ಷಿಗೆ ಸಪ್ಟಂಬರ್-2016 ರ ಹಾಜರಾತಿ ರಜಿಸ್ಟರನ್ನು ತೋರಿಸಲಾಗಿ ಇದು ಸಂಘದ ರಜಿಸ್ಟರ್ ಎಂದರೆ ಸರಿ ಎನ್ನುತ್ತಾರೆ. ಸದರಿ ರಜಿಸ್ಟರನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರ ರೀತ್ಯಾ ದಿನಾಂಕ 26-09-2016 ರಂದು ಕಾರ್ಯದರ್ಶಿಗಳಾಂ ನಾರಾಯಣ ಹೆಗಡೆ ಮತ್ತು ಲಕ್ಷ್ಮೀನಾರಾಯಣ ಶಾನಭಾಗ ಸೊಸೈಟಿಗೆ ಹಾಜರಾಗಿ ಹಾಜರಾತಿಗೆ ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕೆಲವು ಬಾರಿ ಸೊಸೈಟಿಗೆ ಹಾಜರಾಗಿ ಸೊಸೈಟಿಯ ಕಾರ್ಯದ ನಿಮಿತ್ತ ಹೊನ್ನಾವರಕ್ಕೆ ಬರುತ್ತಾರೆ ಎನ್ನುತ್ತಾರೆ. ಕಾರ್ಯದರ್ಶಿಯವರು ಹೊನ್ನಾವರಕ್ಕೆ ಬರುವಾಗ ಚೆಕ್‌ಗಳನ್ನು ತಾವು ಭದ್ರವಾಗಿ ಇಟ್ಟು ಹೊನ್ನಾವರಕ್ಕೆ ಬರುತ್ತಾರೆ ಎಂದರೆ ಕೆಲವು ಬಾರಿ ಭದ್ರವಾಗಿ ಇಟ್ಟು ಬರುತ್ತಾರೆ ಮತ್ತು ಕೆಲವು ಬಾರಿ ಅವಶ್ಯಕತೆ ಬಿದ್ದರೆ 2 ನೇ ಆರೋಪಿಗೆ ಕೊಟ್ಟು ಬಂದಿರುತ್ತಾರೆ ಅಲ್ಲದೇ ಚೆಕ್ ಇಡುವ ಬೀರುವಿನ ಕೀ ಯನ್ನು 2 ನೇ ಆರೋಪಿಯ ಕೈಗೆ ಕೊಟ್ಟು ಬಂದಿರುತ್ತಾರೆ. 2 ನೇ ಆರೋಪಿ ಹಂಗಾಮಿ ನೌಕರ ಎಂದರೆ ಸರಿ. ಸಾಮಾನ್ಯವಾಗಿ ಕೀ ಯನ್ನು ಖಾಯಂ ನೌಕರರ ಬಳಿ ಕೊಡಬೇಕು ಎಂದರೆ ಲಕ್ಷ್ಮೀನಾರಾಯಣ ಶಾನಭಾಗ ಪಡಿತರ ವಿಭಾಗದಲ್ಲಿ ಕೆಲಸ ಮಾಡುವುದರಿಂದ ಮತ್ತು 2 ನೇ ಆರೋಪಿ ಸ್ಥಳೀಯ ಗ್ರಾಮದವರೇ ಆಗಿರುವುದರಿಂದ ಅವರ ಬಳಿ ಕೊಟ್ಟು ಹೋಗುತ್ತಾರೆ ಎನ್ನುತ್ತಾರೆ. ಬೀರುವಿನಲ್ಲಿ ಇಟ್ಟಿರುವ ಎಲ್ಲಾ ಚೆಕ್‌ಗಳೂ ಸಹ 2 ನೇ ಆರೋಪಿಗೆ ಸುಲಭವಾಗಿ ಲಭ್ಯವಾಗುತ್ತವೆ. 3 ಚೆಕ್‌ಗಳನ್ನು ಕಾರ್ಯದರ್ಶಿಯವರು 2 ನೇ ಆರೋಪಿಯ ಕೈಗೆ ಕೊಟ್ಟ ಬಗ್ಗೆ ಏನಾದರೂ ದಾಖಲೆ ಇದೆಯಾ ಎಂದರೆ ನನಗೆ ತಿಳಿದ ಹಾಗೆ ಆ ರೀತಿ ಯಾವುದೇ ದಾಖಲೆಯನ್ನು ಬರೆಸಿಕೊಳ್ಳುವುದಿಲ್ಲ ಎನ್ನುತ್ತಾರೆ.

ಈಗ ಸಾಕ್ಷಿಗೆ ದಿನಾಂಕ 17-10-2016 ರ ಒಂದು ಪತ್ರವನ್ನು ತೋರಿಸಿ ಸದರಿ ಪತ್ರವು ಸಂಘದಿಂದ ನೀಡಲಾಗಿದೆ ಎಂದರೆ ಸರಿ ಎನ್ನುತ್ತಾರೆ. ಸದರಿ ಪತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು. ಯಾವುದಾದರೂ ಚೆಕ್‌ಗಳನ್ನು 2 ನೇ ಆರೋಪಿಗೆ ನೀಡಿದರೆ ನಿಡಿ-4 ರ ರೀತಿ ಪತ್ರವನ್ನು ಬರೆಸಿಕೊಳ್ಳಲಾಗುತ್ತದೆ ಎಂದರೆ 16-09-2016 ರ ಘಟನೆಯ ತರುವಾಯ ಚೆಕ್‌ಗಳನ್ನು

ಹಸ್ತಾಂತರಿಸುವಾಗ ನಿಡಿ-4 ರಂತೆ ಪತ್ರವನ್ನು ಬರೆಸಿಕೊಳ್ಳಲು ಪ್ರಾರಂಭಿಸಲಾಗಿರುತ್ತದೆ ಎನ್ನುತ್ತಾರೆ. ಕಾರ್ಯದರ್ಶಿಗಳು 2 ನೇ ಆರೋಪಿಗೆ ಯಾವುದೇ ಚೆಕ್‌ಗಳನ್ನು ನೀಡುವುದಿಲ್ಲ ಎಂದರೆ ಸರಿಯಲ್ಲ.

ಸೊಸೈಟಿಯಲ್ಲಿ ಸಿಸಿ ಕ್ಯಾಮರಾ ಇದೆ. ಸಂಘದ ಪ್ರತಿನಿತ್ಯದ ಎಲ್ಲಾ ವ್ಯವಹಾರಗಳನ್ನು ಸಿಸಿ ಕ್ಯಾಮರಾದಲ್ಲಿ ನೋಡಬಹುದು ಎಂದರೆ ಸರಿ. ಘಟನೆ ನಡೆಯುವ ಕಾಲಕ್ಕೆ ಘಟನೆ ನಿಜವಾಗಿ ನಡೆದಿದ್ದರೆ ಸಿಸಿ ಕ್ಯಾಮರಾದ ದೃಶ್ಯವನ್ನು ಪೋಲೀಸರಿಗೆ ಕೊಡಲು ಏನು ತೊಂದರೆ ಇತ್ತು ಎಂದರೆ ಸಿಸಿ ಕ್ಯಾಮರಾದ ಎಲ್ಲಾ ಕಾರ್ಯವನ್ನು 2 ನೇ ಆರೋಪಿ ಕುಳಿತುಕೊಳ್ಳುವ ಜಾಗದಲ್ಲಿಯೇ 2 ನೇ ಆರೋಪಿಯೇ ಆಪರೇಟ್ ಮಾಡುತ್ತಿದ್ದುದ್ದರಿಂದ ಈ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ ಎನ್ನುತ್ತಾರೆ. ಚೆಕ್ ದುರುಪಯೋಗ ಆದ ವಿಚಾರ ಗೊತ್ತಾದ ದಿನವೇ ನೀವು ಸಿಸಿ ಕ್ಯಾಮರಾ ಪರಿಶೀಲಿಸಿ ಅದೇ ದಿನ ದೂರು ನೀಡಲು ತೊಂದರೆ ಇತ್ತಾ ಎಂದರೆ ಈ ವಿಚಾರ ನನಗೆ ಗೊತ್ತಾಗಿದ್ದೇ ದಿನಾಂಕ 05-10-2016 ರಲ್ಲಿ ಮತ್ತು ಆ ವೇಳೆಗೆ ಸಿಡಿಒ ರವರಿಗೆ ಪತ್ರ ಬರೆದಾಗಿತ್ತು. ನಿಪಿ-3 ರ ಚೆಕ್‌ನ ಮೊತ್ತವು 1 ನೇ ಆರೋಪಿಯ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ನಾನು ಹೇಳಿರುವಂತೆ 2 ನೇ ಆರೋಪಿ ಸಂಘದ ಚೆಕ್‌ನ್ನು ಕದ್ದು 1 ನೇ ಆರೋಪಿಗೆ ನೀಡಿರುವುದಿಲ್ಲ ಮತ್ತು 1 ನೇ ಆರೋಪಿ ಮೋಸದಿಂದ ಹಣವನ್ನು ಜಮಾ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**